ಮುಂಜೂರು ಮಾಡುತ್ತಾರೆ. ಪಟ್ಟಣಕ್ಕೆ ಹೆಚ್ಚು ಕೊಡಬೇಕೂ ಮತ್ತು ಹಳ್ಳಿಗಳ ಕಡೆಗೆ ಕಡಿಮೆ ಕೊಡಬೇಕು ಎನ್ನುವ ತಾರತಮ್ಯ ಮನೋಭಾವನೆ ಸರ್ಕಾರಕ್ಕೆ ಇಲ್ಲ

ಅಧ್ಯಕ್ಷರು, —ಈಗ ಶ್ರೀ ಬಿ. ಲಕ್ಕಪ್ಪನವರ ಪ್ರಶ್ನೆ.

ವಲಯ ಅರಣ್ಯ ಅಧಿಕಾರಿಗಳಿಗೆ ಕೊಡುವ ಮುಂಗಡ ಹಣ

೩೦೨. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅರಣ್ಯ ಉದ್ದೇಶದ ಕಾಮಗಾರಿಗಳನ್ನು ಪ್ರಾರಂಭಿಸಲು ವಲಯ ಅರಣ್ಯ ಅಧಿಕಾರಿಗಳಿಗೆ ಬಿಲ್ಲು ಬರುವ ಮುನ್ನವೇ ಮುಂಗಡವಾಗಿ ಹಣ ಕೊಡುವ ಪದ್ಧತಿ ಇದ್ದಿತ್ತೇ ಮತ್ತು ಈಗಲೂ ಆ ಪದ್ಧತಿ ಮುಂದುವರಿಸಲಾಗುತ್ತಿದೆಯೇ ?

ಆ) ಈ ರೀತಿ ಕೊಟ್ಟ ಮುಂಗಡ ಹಣವನ್ನು ಯಾವ ಲೆಕ್ಕದಲ್ಲಿ ಜಮಾ ಮಾಡಲಾಗಿಂತ್ತಿದೆ ?

ಇ) ಮುಂಗಡ ಹಣದಲ್ಲಿ ವೆಚ್ಚವಾಗದೇ ಹಣ ಉಳಿಯುತ್ತಿರುವುದು ನಿಜವೇ ?

ಈ) ಈ ರೀತಿ ಉಳಿದ ಹಣವನ್ನು ವಲಯ ಅರಣ್ಯ ಅಧಿಕಾರಿಗಳು ಸ್ವಂತಕ್ಕೆ ವೆಚ್ಚ ಮಾಡಿ ಕೊಂಡು ಕೋಟಿಗಟ್ಟಲೆ ಹಣ ಸರ್ಕಾರಕ್ಕೆ ಬಾಕಿ ನಿಲ್ಲಿಸಿರುವುದು ನಿಜವೇ ?

ಉ) ಇಂತಹ ಹಣಕ್ಕೆ ಯಾವ ತರಹದ ವಸೂಲಾತಿ ಕ್ರಮವನ್ನು ಸರ್ಕಾರ ಕೈಗೊಂಡಿದೆ ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇತ್ತು. ಈಗಿಲ್ಲ.

ಆ) ಅರಣ್ಯ ಇಲಾಖೆಯ ಆರ್ಥಿಕ ಸಂಹಿತೆ ೧೯೭೬ರ ಪ್ರಕಾರ ಕೊಟ್ಟ ಮುಂಗಡ ಹಣವನ್ನು ''ಅರಣ್ಯ ಮುಂಗಡ'' ಎಂದು ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳ ಲೆಕ್ಕದಲ್ಲಿ ಜಮಾ ಮಾಡಲಾಗುತ್ತಿತ್ತು.

ಇ) ನಿಜವಲ್ಲ.

ಈ) ನಿಜವಲ್ಲ. ಮುಂಗಡ ಹಣಕ್ಕೆ ಸಂಬಂಧಪಟ್ಟ ಮೊಬಲಗನ್ನು ಆಯಾ ಅರಣ್ಯ ವಲಯಾಧಿಕಾರಿಗಳ ಲೆಕ್ಕದಲ್ಲಿ ತೋರಿಸಂತ್ತಿದ್ದು ಕಾವಂಗಾರಿಗಳ ಪರಿಶೀಲನೆಯಾದ ಮೇಲೆ ಲೆಕ್ಕದಿಂದ ಕಳೆಯಲಾಗುತ್ತಿತ್ತು.

ಉ) ತನಿಖೆಗೆ ಒಳಪಟ್ಟ ಕಾವಂಗಾರಿಗಳಲ್ಲಿ ವ್ಯತ್ಯಾಸಗಳು ಕಂಡುಬಂದಾಗ ಅಂತಹ ಕಾಮಗಾರಿಯನ್ನು ನಿರಾಕರಿಸಲ್ಪಟ್ಟ ಕಾಮಗಾರಿ ಎಂದು ಪರಿಗಣಿಸಿ ಅರಣ್ಯ ಇಲಾಖೆ ಆರ್ಥಿಕ ಸಂಹಿತೆ ೨೧೦ರಿಂದ ೨೧೪ ರಲ್ಲಿ ನಮೂದಿಸಿರುವ ಅಧಿನಿಯಮದಂತೆ ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಲಾಗುತ್ತದೆ.

ಶ್ರೀ ಬಿ. ಲಕ್ಕಪ್ಪ —ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅರಣ್ಯ ಉದ್ದೇಶಿತ ಕಾವಂಗಾರಿಗಳನ್ನು ಪ್ರಾರಂಭಿಸಲು ವಲಯ ಅರಣ್ಯ ಅಧಿಕಾರಿಗಳಿಗೆ ಬಿಲ್ಲು ಬರುವ ಮುನ್ನವೇ ಮುಂಗಡವಾಗಿ ಹಣ ಕೊಡುವ ಪದ್ಧತಿ ಇದ್ದಿತ್ತೇ ಮತ್ತು ಈಗಲೂ ಆ ಪದ್ಧತಿ ಮುಂದುವರಿಸಲಾಗುತ್ತಿದೆಯೇ ಎಂದು ಕೇಳಿದ ಪ್ರಶ್ನೆಗೆ ಮಾನ್ಯ ಅರಣ್ಯ ಸಚಿವರು, ..ಇತ್ತು, ಈಗಿಲ್ಲ'' ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಹಾಗಾದರೆ ಎಲ್ಲಿಯವರೆಗೆ ಆ ಪದ್ಧತಿ ಇತ್ತು ಮತ್ತು ಯಾವಾಗಿನಿಂದ ಆ ಪದ್ಧತಿ ಇಲ್ಲ ಎಂದು ತಿಳಿಸಬೇಕು. ಹಾಗೆಯೇ ಈ ರೀತಿಯಲ್ಲಿ ಕೊಟ್ಟ ಮುಂಗಡ ಹಣವನ್ನು ಯಾವ ಲೆಕ್ಕದ ಅಡಿಯಲ್ಲಿ ಇಡಲಾಗುತ್ತಿದೆ ಎಂದು ತಿಳಿಸಬೇಕು.

ಶ್ರೀ ಜಿ. ಎಸ್. ಬಾಗಲ್‌ಕೋಟ್.—ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆಯ ಆರ್ಥಿಕ ಸಂಹಿತೆ ೧೯೭೬ರ ಪ್ರಕಾರ ಕೊಟ್ಟ ಹಣವನ್ನು ''ಅರಣ್ಯ ಮುಂಗಡ' ಎಂದು ಪರಿಗಣಿಸಲಾಗುತ್ತಿತ್ತು. ಅದನ್ನು ಸಂಬಂಧಪಟ್ಟ ಅಧಿಕಾರಿಗಳ ಲೆಕ್ಕದಲ್ಲಿ ಜಮಾ ಮಾಡಲಾಗುತ್ತಿತ್ತು. ಮೊದಲಿದ್ದಂತಹ ಪದ್ಧ

ತಿಯನ್ನು ''ಕರ್ನಾಟಕ ಫಾರೆಸ್ಟ್ಸ್ ಅಕೌಂಟ್ಸ್ ಕೋಡ್'' ಗೆ ತಿದ್ದುಪಡಿ ಮಾಡಿ, ಆ ತಿದ್ದುಪಡಿಯು ೧-೧೧-೧೯೭೭ ರಿಂದ ಅಮಲಿನಲ್ಲಿ ಬಂದಿದೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಅರಣ್ಯ ಉದ್ದೇಶಿತ ಕಾಮಗಾರಿಗಳನ್ನು ಪ್ರಾರಂಭಿಸಲು ವಲಯ ಅರಣ್ಯ ಅಧಿಕಾರಿಗಳಿಗೆ ಬಿಲ್ಲು ಬರುವ ಮುನ್ನವೇ ಮುಂಗಡವಾಗಿ ಹಣ ಕೊಡುವ ಪದ್ಧತಿ ಹಿಂದೆ ಇತ್ತು ಎಂದು ಹೇಳಿದ್ದಾರೆ. ಆ ಪದ್ಧತಿ ಇದ್ದಂತಹ ಕಾಲದಲ್ಲಿ ಸುಮಾರು ೮೦೦ ಅರಣ್ಯ ಅಧಿಕಾರಿಗಳು ಕೆಲಸ ಮಾಡುತ್ತಾ ಇದ್ದಾರೆ ಅವರಿಗೆ ಲಕ್ಷಗಟ್ಟಲೆ ಹಣವನ್ನು ಮುಂಗಡವಾಗಿ ಕೊಡುತ್ತಾ ಇದ್ದೀರಿ. ಹೀಗೆ ಅವರಿಗೆ ನಿರ್ವಹಿಸಲ್ಪಟ್ಟ ಕಾಮಗಾರಿಗಳು ಮುಗಿಯುವುದಕ್ಕೂ ಸಾಧ್ಯ, ಅಥವಾ ಮುಗಿಯದಿರುವುದಕ್ಕೂ ಸಾಧ್ಯವಿದೆ. ಆದರೆ ಅಂತಹ ಅಧಿಕಾರಿಗಳು ತಮ್ಮ ಹತ್ತಿರ ಮುಂಗಡ ಪಡೆದ ಹಣ ಇಲ್ಲ ಎಂದು ಹೇಳುತ್ತಾರೆ. ಇದು ನಿಜವೇ ? ಹೀಗೆ ಕೊಟ್ಟ ಹಣವನ್ನು ಯಾವ ಲೆಕ್ಕದ ಅಡಿಯಲ್ಲಿ ಇಡುತ್ತಾ ಇದ್ದೀರಿ ? ಹಾಗೆ ಕೊಟ್ಟ ಹಣದಲ್ಲಿ ಎಷ್ಟು ಹಣ ಉಳಿದಿದೆ ಎಂದು ಹೇಳುತ್ತೀರಾ ?

ಶ್ರೀ ಜಿ. ಎಸ್. ಬಾಗಲ್‌ಕೋಟ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಆ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಹೇಳಿದ್ದೇನೆ. ''ಅರಣ್ಯ ಇಲಾಖೆಯ ಆರ್ಥಿಕ ಸಂಹಿತೆಯ ೧೯೭೬ರ ಪ್ರಕಾರ ಕೊಟ್ಟ ಮುಂಗಡ ಹಣವನ್ನು'' ಅರಣ್ಯ ಮುಂಗಡ ಎಂದರ ಪರಿಗಣಿಸಿ ಸಂಬಂಧ ಪಟ್ಟ ಅಧಿಕಾರಿಗಳ ಲೆಕ್ಕದಲ್ಲಿ ಜಮಾ ಮಾಡಲಾಗುತ್ತಿತ್ತು ಎಂದು ಹೇಳಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಹೀಗೆ ಎಷ್ಟು ಹಣವನ್ನು ಮುಂಗಡವಾಗಿ ಕೊಡುತ್ತಾ ಇದ್ದೀರಿ ?

ಶ್ರೀ ಜಿ. ಎಸ್. ಬಾಗಲ್‌ಕೋಟ್.—ಮೊದಲಿದ್ದಂತಹ ಪದ್ಧತಿಯ ಪ್ರಕಾರ ಮುಂಗಡವಾಗಿ ಕೊಟ್ಟಂಥ ಹಣವನ್ನು ಆಯಾಯ ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಚೆಕ್ ಮಾಡಿ ಒಂದು ನಿರ್ಣಯಕ್ಕೆ ಬಂದ ನಂತರ ಅವರ ಖಾತೆಗೆ ನಿಗದಿತ ಹಣವನ್ನು ಜಮಾ ಮಾಡಲಾಗುತ್ತಿತ್ತು ಇದರಲ್ಲಿ ಯಾವ ದುರ್ವ್ಯವಹಾರವೂ ಆಗಿಲ್ಲ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಹೀಗೆ ನೀವು ಕೊಟ್ಟ ಮುಂಗಡ ಹಣದಲ್ಲಿ ಎಷ್ಟೆಷ್ಟು ಹಣ ಉಳಿದಿದೆ ಎಂದು ಹೇಳಬೇಕು.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಇಲ್ಲದಿದ್ದರೆ ನಾನು ಮಾನ್ಯ ಮಂತ್ರಿಯವರಿಗೆ ಉತ್ತರ ಹೇಳಬೇಡಿ ಎಂದು ಹೇಳಬೇಕಾಗುತ್ತದೆ. ಕಾರಣ ಈಗಾಗಲೇ ಪ್ರಶ್ನೋತ್ತರದ ಸಮಯ ವಿೂರಿ ಹೋಗಿದೆ.

ಶ್ರೀ ಬಿ. ಲಕ್ಕಪ್ಪ.—ನಾನು ಮೂರು ಉಪ ಪ್ರಶ್ನೆಗಳನ್ನು ಕೇಳಬಹುದಲ್ಲ ?

ಅಧ್ಯಕ್ಷರು.—ಹಾಗೇನೂ ನಿಯಮದಲ್ಲಿ ಇಲ್ಲ, ಅದು ನನ್ನ ಮರ್ಜಿ. ಸಮಯ ಸಂದರ್ಭಗಳನ್ನು ನೋಡಿಕೊಂಡು ನಾನು ಒಂದೆರಡು ಉಪಪ್ರಶ್ನೆಗಳಿಗೆ ಮಾತ್ರವೇ ಅವಕಾಶವನ್ನು ಕೊಡಬಹುದು ಅಥವಾ ನಾಲ್ಕೈದು ಉಪಪ್ರಶ್ನೆಗಳಿಗೂ ಅವಕಾಶವನ್ನು ಕೊಡಬಹುದು.

ಶ್ರೀ ಬಿ. ಲಕ್ಕಪ್ಪ.—ಬೇರೆಯವರಿಗೆ ಕೊಟ್ಟ ಅವಕಾಶಗಳ ಹಾಗೆ ನನಗೂ ಕೂಡ ಕೊಡಿ. ನಾನು ಕೇಳಿದ ಪ್ರಶ್ನೆಯ ಬಗ್ಗೆ ನಾನು ವಿವರಗಳನ್ನು ಪಡೆದುಕೊಂಡಿದ್ದೇನೆ. ಈ ರೀತಿಯ ವ್ಯವಹಾರದಲ್ಲಿ ಒಂದೂವರೆ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಹಣ ದುರುಪಯೋಗ ಆಗಿದೆ. ಇದರಿಂದ ಸರಕಾರಿ ಖಜಾನೆಗೆ ನಷ್ಟವಾಗಿದೆ. ಆದುದರಿಂದ ನಾನು ಈ ಪ್ರಶ್ನೆಗೆ ಸೂಕ್ತವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಜಿ. ಎಸ್ ಬಾಗಲಕೋಟೆ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಯಾವುದೇರೀತಿಯ ದುರುಪಯೋಗ ಆಗಿಲ್ಲ, ಮಾನ್ಯ ಸದಸ್ಯರಿಗೆ ಈ ವಿಚಾರದಲ್ಲಿ ಇನ್ನೂ ಹೆಚ್ಚಿಗೆ ವಿವರಗಳು ಬೇಕಾದಲ್ಲಿ ನಾನು ಅದನ್ನು ತರಿಸಿ ಅವರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಜಿ. ಸಿ. ಶಿವಣಂಜಪ್ಪ.—ಜಿಲ್ಲಾ ಪರಿಷತ್ತು ಜಾರಿಗೆ ಬಂದ ಮೇಲೆ ಈ ಪಶುಚಿಕಿತ್ಸಾ ಆಸ್ಪತ್ರೆಗಳನ್ನು ಅವರಿಗೆ ವರ್ಗಾವಣೆ ಮಾಡಿದ್ದೀರಿ. ಈ ಪರಿಸ್ಥಿತಿ ಬಂದಮೇಲೆ ನಿಮ್ಮ ಕೆಲಸ ಏನು ಮಂತ್ರಿ ಶಾಸಕರಾಗಿ ನಮ್ಮ ಕೆಲಸ ಏನು ಎಂದು ದಯವಮಾಡಿ ತಾವು ಸರಕಾರದ ಮೂಲಕ ಹೇಳುತ್ತೀರಾ ?

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ತು ಹಾಗೂ ಮಂಡಲ ಪಂಚಾಯತಿಗೆ ಕಾನೂನನ್ನು ಮಾಡುವಾಗ ಮಾನ್ಯ ಶಿವನಂಜಪ್ಪನವರೂ ಕೂಡ ಇದ್ದಾರೆ. ೧೮೨೯ನೇ ವಿಧಿಯಲ್ಲಿ ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯತಕ್ಕಂತಹ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿದೆ. ಅಧಿಕಾರ ವಿಕೇಂದ್ರೀಕರಣ ಮಾಡುವಾಗ ಮತ್ತು ಹೊಸ ಯೋಜನೆಗಳನ್ನು ರೂಪಿಸುವಾಗ ಎಲ್ಲೆಲ್ಲಿ ಆಗತ್ಯವಿದೆ, ಆದ್ಯತೆ ಇದೆ ಎಂಬುದನ್ನು ನೋಡಿ ಇದನ್ನು ಮಾಡಿದ್ದೇವೆ, ಪಶುವೈದ್ಯ ಶಾಲೆಗಳನ್ನು ತೆರೆಯತಕ್ಕಂಥಾದ್ದನ್ನು ಬಿಟ್ಟು ಉಳಿದ ಕೆಲಸಗಳನ್ನು ನಾವು ಮಾಡುತ್ತೇವೆ.

ಶ್ರೀ ಜಿ ಎಸ್. ಶಿವನಂಜಪ್ಪ.—ನಿಮ್ಮನ್ನು ಯಾವುದು ಕೊಡಿ ಎಂದು ಕೇಳುವುದು, ಯಾವುದನ್ನು ಬಿಡುವುದು, ನಾವು ನಿಮ್ಮನ್ನು ಕೇಳಬೇಕಾಗಿರುವುದು ಯಾವುದು ಅದನ್ನಾದರೂ ತಿಳಿಸಿ? ಇದು ಇಡೀ ಸದನದ ಪ್ರಶ್ನೆ. ನಿಮ್ಮ ಇಲಾಖೆಯ ಬಗ್ಗೆ ನಾವು ನಿಮ್ಮನ್ನು ಏನೇನು ಕೇಳುವುದಕ್ಕೆ ಅಧಿಕಾರವಿದೆ ನೀವು ಏನೇನು ಕೊಡುವುದಕ್ಕೆ ಅಧಿಕಾರವಿದೆ ಎಂಬುದನ್ನು ತಿಳಿಸಿ. ನಾವು ಅಷ್ಟು ಮಾತ್ರ ಕೇಳುತ್ತೇವೆ. ಕೇಳಬೇಕಾದರೆ ಆಕಾಶದಿಂದ ಭೂಮಿಯು ತನಕ ಇದೆ.

ಶ್ರೀ ಸಿದ್ದರಾಮಯ್ಯ.—ಅಧಿಕಾರ ವಿಕೇಂದ್ರೀಕರಣ ಮಾಡತಕ್ಕಂತಹ ಸಂದರ್ಭದಲ್ಲಿ ಹೊಸ ಪಶುವೈದ್ಯಶಾಲೆಗಳನ್ನು ತೆರೆಯತಕ್ಕಂತಹ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಿದ್ದೇವೆ ಅದನ್ನು ಬಿಟ್ಟು ಉಳಿದ ಎಲ್ಲಾ ಅಧಿಕಾರಗಳು ರಾಜ್ಯ ಮಟ್ಟದ ಉಸ್ತುವಾರಿಯಲ್ಲಿ ನೋಡಿಕೊಳ್ಳುತ್ತೇವೆ. ನಿಮಗೆ ಏನು ಬೇಕು ಎಂದು ಕೇಳಿದರೆ ಹೇಳುತ್ತೇನೆ. ಉಳಿದ ಎಲ್ಲಾ ಅಧಿಕಾರ ನಮಗೆ ಇರುತ್ತದೆ.

ಶ್ರೀ ಜಿ ಎಸ್. ಶಿವನಂಜಪ್ಪ.—ಇದು ಇಡೀ ಸದನದ ಪ್ರಶ್ನೆ. ಇವರಂ ದುಡ್ಡು ಕೊಟ್ಟರೆ ತಾನೇ ಆವರು ಮಂಜೂರು ಮಾಡುವುದು. ಆಸ್ಪತ್ರೆಗಳಿಂದ ಜಿಲ್ಲಾ ಪರಿಷತ್ತಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂಬುದನ್ನು ತಿಳಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಜಿಲ್ಲಾ ಪರಿಷತ್ ಕಾಯಿದೆಯನ್ನು ಈ ಸದನದಲ್ಲಿ ಅಂಗೀಕಾರ ಮಾಡಿದ್ದೇವೆ. ಇದು ಅಸ್ತಿತ್ವಕ್ಕೆ ಬಂದು ಒಂದು ವರ್ಷ ಕಳೆದುಹೋಗಿದೆ. ಜಿಲ್ಲಾ ಪರಿಷತ್ತಿನ ಸದಸ್ಯರಿಗೆ ಏನೇನು ಅಧಿಕಾರ ಇದೆ, ಶಾಸಕರಿಗೆ ಏನೇನು ಅಧಿಕಾರವಿದೆ ಎಂಬುದು ಮಾನ್ಯ ಸದಸ್ಯರಾದ ಶಿವನಂಜಪ್ಪನವರಿಗೆ ಗೊತ್ತಿಲ್ಲವೇ?

ಶ್ರೀ ಜಿ.ಎಸ್. ಶಿವನಂಜಪ್ಪ.—ಗೊತ್ತಿಲ್ಲವೆಂದು ಕೇಳುತ್ತಿದ್ದೇನೆ. ಗೊತ್ತಿದ್ದರೆ ಕೇಳುತ್ತಿರಲಿಲ್ಲ, ಮಾನ್ಯ ಸಿದ್ದರಾಮಯ್ಯನವರನ್ನು ಕೇಳಿದರೆ ಅಲ್ಲಿ ತೋರಿಸುತ್ತಾರೆ.

ಅಧ್ಯಕ್ಷರು.—ಮಾನ್ಯ ಕೃಷ್ಣಪ್ಪನವರ ಪ್ರಶ್ನೆ ೪೬೨ ಕಾರ್ಮಿಕ ಇಲಾಖೆಗೆ ಹೋಗಿದೆ, ಕಾರ್ಮಿಕ ಇಲಾಖೆಯವರು ಉತ್ತರ ಕೊಡುತ್ತಾರೆ.

ರಾಜ್ಯದಲ್ಲಿರುವ ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ.

೪೮. ಶ್ರೀ ಗೋಪಾಲ ಮಯ್ಯಕಂದ ಕಾನಡೆ (ಸಿರ್ಸಿ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಈ ಎಲ್ಲಾ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಸರಬರಾಜಾಗುತ್ತಿರುವುದು ನಿಜವೆ?

ಇ) ಹಾಗಿದ್ದಲ್ಲಿ ಯಾವ ಯಾವ ಕಾರ್ಖಾನೆಗಳಿಗೆ ಯಾವ ಯಾವ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗುತ್ತಿದೆ.

ಈ) ಈ ಕೈಗಾರಿಕೆಗಳಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣ ಎಷ್ಟು?